ಉದ್ಭವಿಸಿರಲಿಲ್ಲ. ಈ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಕೇಂದ್ರ ಸರ್ಕಾರ ಉದ್ದಿಮೆಯಾಗಿರುವುದರಿಂದ, ಇನ್ನು ಮುಂದೆ ನೇಮಕಾತಿಗಳನ್ನು ಮಾಡುವಾಗ ಶ್ರೀಮತಿ ಸರೋಜಿನಿ ಮಹಿಷಿಯವರ ವರದಿಯ ಮೇಲೆ ಸರ್ಕಾರ ತೆಗೆದುಕೊಂಡಿರುವ ತೀರ್ಮಾನ ರೀತ್ಯಾ ಕ್ರಮ ತೆಗೆದುಕೊಳ್ಳುವಂತೆ ಸದರಿ ಕಂಪನಿಗೆ ತಿಳಿಸಲಾಗುವುದು.

ಉಪಾಧ್ಯಕ್ಷೀಣಿಯವರು : ಶ್ರೀಯುತ ಜಿ. ರಾಜುಗೌಡರವರು

3) ರೇಷ್ಮೆ ಬೆಲೆ ಸ್ಥಿರೀಕರಣ ಸಮಿತಿಗೆ ಶಾಸಕರನ್ನು ಅಧ್ಯಕ್ಷರನ್ನಾಗಿ ನೇಮಿಸುವುದು

ಶ್ರೀ ಜಿ. ರಾಜುಗೌಡ ಹನೂರು : ಮಾನ್ಯ ಉಪಾಧ್ಯಕ್ಷೀಣಿಯವರೆ, ರೇಷ್ಮೆ ಇಲಾಖೆಯಲ್ಲಿ ಬೆಲೆ ಸ್ಥಿರೀಕರಣ ನಿಧಿ ಇದೆ. ಇದು ರೇಷ್ಮೆ ಗೂಡುದಾರರುಗಳಲ್ಲೂ ಮತ್ತು ರೇಷ್ಮೆ ಕೊಂಡು ಕೊಳ್ಳುವವರಲ್ಲೂ ವಸೂಲು ಮಾಡುವ ಹಣವಾಗಿದೆ. ಈ ಹಣ ಇದುವರೆಗೆ ಸುಮಾರು 70 ಕೋಟಿ ರೂ.ಗಳಷ್ಟು ಶೇಖರಿಸಲಾಗಿದೆ. ಈ ಹಣವನ್ನು ರೇಷ್ಮೆ ಕೈಷಿಕರ, ರೇಷ್ಮೆ ಉದ್ಯಮದವರ ಏಳಿಗೆಗೆ ವೆಚ್ಚ ಮಾಡಬೇಕೆಂದು ನಿಬಂಧನೆ ಇದೆ. ಈ ನಿಬಂಧನೆಯನ್ನು ಬದಿಗೊತ್ತಿ ಈ ಬೆಲೆ ಸ್ಥಿರೀಕರಣ ನಿಧಿಯನ್ನು ಸಿಕ್ಕಾಪಟ್ಟೆ ಮನೋ ಇಚ್ಛೆಯಂತೆ ಸರ್ಕಾರ ವೆಚ್ಚ ಮಾಡುತ್ತಿರುವುದು ಬಹಳ ದುಃಖಕರವಾಗಿದೆ ಈ ನಿಧಿಯನ್ನು ರಕ್ಷಣೆಮಾಡಿ ಯಾವ ಬಾಬುಗಳಿಗೆ ಈ ಹಣವನ್ನು ವೆಚ್ಚ ಮಾಡಬೇಕೋ ಅದಕ್ಕೆ ವೆಚ್ಚ ಮಾಡಿದರೆ, ನಿಮ್ಮ ಹೊಣೆಗಾರಿಕೆಯನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡಿದಂತೆ ಆಗುತ್ತದೆ. ಇಲ್ಲದಿದ್ದರೆ, ನೀವು ಕರ್ತವ್ಯಲೋಪದ ದೋಶವನ್ನು ಹೊರಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ತಮ್ಮ ಆಯವ್ಯಯ ಭಾಷಣದಲ್ಲಿ ಈ ನಿಧಿಯಿಂದ 8 ಕೋಟಿ. ರೂ.ಗಳನ್ನು ಮುರಿದು ಕೊಳ್ಳುವುದಾಗಿ ಹೇಳಿದ್ದಾರೆ. ಈ ರೀತಿ ಮಾಡಬೇಕಾದರೆ, ಈಗಿರುವ ನಿಯಮವನ್ನು ತಿದ್ದುಪಡಿ ಮಾಡಬೇಕಾಗಿದೆ. ಈ ನಿಧಿಯ ಸಂಗ್ರಹಣೆಗೆ ಕಾರಣರಾಗಿರುವವರನ್ನು ಈಗಿರುವ ಬೆಲೆ ಸ್ಥಿರೀಕರಣ ಸಮಿತಿಯಿಂದ ಕೈಬಿಟ್ಟಿರುವುದು ಬಹಳ ಅನ್ಯಾಯವಾಗಿದೆ. ದಯವಿಟ್ಟು ರೇಷ್ಮೆಗೂಡು ಬೆಳೆಯುವವರೊಬ್ಬರನ್ನು ನೂಲು ಬಿಚ್ಚುವವರೊಬ್ಬರನ್ನು ರೇಷ್ಮೆ ವ್ಯಾಪಾರಿಯೊಬ್ಬರನ್ನು ಈ ಮೇಲ್ಕಂಡ ಸಂಸ್ಥೆಗೆ ಸದಸ್ಯರನ್ನಾಗಿ ಮಾಡಿ, ರೇಷ್ಮೆ ಬೆಳೆ ಪ್ರದೇಶದಿಂದ ಬಂದಿರುವ ಒಬ್ಬರನ್ನು ಈ ಸಂಸ್ಥೆಯ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ನಿಧಿಯ ಹಣವನ್ನು ರೇಷ್ಮೆ ಕಡ್ಡಿ ಬೆಳೆಯುವ ರೈತರಿಗೆ ನೀರಾವರಿ ಬೆಳೆ ತೆಗೆಯಲಿಕ್ಕೆ, ರೇಷ್ಮೆ ದಾರವನ್ನು ಬಿಚ್ಚುವವರಿಗೆ ಉಪಕರಣ ಸಲಕರಣೆಗಳನ್ನು ಕೊಂಡುಕೊಳ್ಳುವುದಕ್ಕೆ ಹಾಗೂ ರೇಷ್ಮೆ ದಾರ ಬಿಚ್ಚುವ ಸಹಕಾರ ಸಂಘಗಳಿಗೆ ಕೊಡಬೇಕಾದ ಸುಸ್ತಿ ಬಡ್ಡಿ ಹಾಗೂ ಸರಳ ಬಡ್ಡಿಗೆ ಸರಿಪಡಿಸಲಿಕ್ಕೆ ಕೊಡಬೇಕೆಂದು ಈ ಮೂಲಕ ಮಾನ್ಯ ರೇಷ್ಮೆ ರಾಜ್ಯ ಸಚಿವರನ್ನು ಒತ್ತಾಯಸುತ್ತೇನೆ. ಈ ನಿಧಿಯನ್ನು ತಮ್ಮದೇ ಆದ ಶೀರ್ಷಿಕೆಯಲ್ಲಿ ಈ ಹೆಡ್ಡಿಗೆ ವರ್ಗಾಯಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು) : ಮಾನ್ಯ ಸಭಾಧ್ಯಕ್ಷೀಣಿಯವರೆ,

ಕರ್ನಾಟಕ ರೇಷ್ಮೆ ಹುಳು, ಬಿತ್ತನೆ, ಗೂಡು ಮತ್ತು ರೇಷ್ಮೆ ನೂಲು (ಉತ್ಪಾದನಾ, ಸರಬರಾಜು, ವಿತರಣೆ, ಮತ್ತು ಮಾರಾಟ ನಿಯಂತ್ರಣ) ಕಾಯ್ದೆ 1959, ಸೆಕ್ಷನ್ 17 'ಎ' ನಲ್ಲಿ ಕರ್ನಾಟಕ ರೇಷ್ಮೆ ಹುಳು, ಬಿತ್ತನೆ ಗೂಡು ಮತ್ತು ರೇಷ್ಮೆ ನೂಲು ಅಭಿವೃದ್ಧಿ ಮತ್ತು ಬೆಲೆ ಸ್ಥಿರೀಕರಣ ನಿಧಿಯನ್ನು ರಚಿಸಲು ಅವಕಾಶವಿದೆ.

ಇದೇ ಕಾಯ್ದೆಯ ನಿಯಮ 17 (ಜೆ)ಯ ಪ್ರಕಾರ ಕಾಯ್ದೆ 17ಎನಲ್ಲಿ ರಚಿತವಾದ ನಿಧಿಯ ಆಡಳಿತಕ್ಕಾಗಿ, ಕರ್ನಾಟಕ ರೇಷ್ಮೆಹುಳು ಬಿತ್ತನೆ ಗೂಡು ಮತ್ತು ರೇಷ್ಮೆ ನೂಲು, ಬೆಲೆ, ಸ್ಥಿರೀಕರಣ ನಿಧಿಯ ಪ್ರಾಧಿಕಾರವನ್ನು ರಚಿಸಲಾಗಿದೆ. ಇದರ ಸದಸ್ಯರು ಕೆಳಕಂಡಂತಿದೆ.

1. ರೇಷ್ಮೆ ನಿರ್ದೇಶಕರು ಅಧ್ಯಕ್ಷರು
2. ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಪ್ರತಿನಿಧಿಯವರು (ಉಪಕಾರ್ಯದರ್ಶಿಗಳ ಹುದ್ದೆಗೆ ಮೇಲ್ಪಟ್ಟ ಸರ್ಕಾರದಿಂದ ನೇಮಿಸಲ್ಪಟ್ಟವರು) ಸದಸ್ಯರು
3. ಹಣಕಾಸು ಇಲಾಖೆಯಿಂದ ಪ್ರತಿನಿಧಿಗಳು (ಉಪಕಾರ್ಯದರ್ಶಿ ಹುದ್ದೆಗೆ ಕಡಿಮೆ ಇಲ್ಲ ತಕ್ಕದ್ದವರು) - ಸದಸ್ಯರು
4. ಯೋಜನೆ ಇಲಾಖೆಯಿಂದ ಪ್ರತಿನಿಧಿಗಳು (ಉಪಕಾರ್ಯದರ್ಶಿ ಹುದ್ದೆಗೆ ಕಡಿಮೆ, ಇಲ್ಲ ತಕ್ಕದ್ದವರು) ಸದಸ್ಯರು
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಲಿ, ಬೆಂಗಳೂರು. ಸದಸ್ಯರು
6. ಜಂಟಿ ನಿರ್ದೇಶಕರು, ತಾಂತ್ರಿಕ ಸೇವಾ ವಿಭಾಗ, ರೇಷ್ಮೆ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು. ಸದಸ್ಯರು
7. ರೇಷ್ಮೆ ಮಾರುಕಟ್ಟೆ ಅಧಿಕಾರಿ, ಬೆಂಗಳೂರು ಸದಸ್ಯ ಸಂಚಾಲಕರು.

ಬೆಲೆ ಸ್ಥಿರೀಕರಣ ನಿಧಿಯನ್ನು ಸ್ಥಾಪಿಸಿರುವುದು ನಿಧಿಯ ಹಣವನ್ನು ಗೂಡು ಮತ್ತು ರೇಷ್ಮೆದಾರದ ಬೆಲೆಯ ಸ್ಥಿರೀಕರಣಕ್ಕೆ ಮತ್ತು ಹುಳುಸಾಕಾಣಿಕೆ, ಬಿತ್ತನೆ, ನೂಲುಬಿಚ್ಚಾಣಿಕೆ, ಮತ್ತು ರೇಷ್ಮೆ ದಾರದ ಹುರಿಮಾಡುವಿಕೆ ಹಾಗೂ ಇದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಖರ್ಚು ಮಾಡುವುದಕ್ಕೋಸ್ಕರ ಇದಲ್ಲದೇ ಈ ನಿಧಿಯನ್ನು ನಿಗದಿ ಪಡಿಸಿದ ಬೇರೆ ವಿಷಯಗಳಿಗೂ ಕೂಡ ಖರ್ಚುಮಾಡುವುದು. ಇದಕ್ಕೆ ಸಂಬಂಧಪಟ್ಟ ಹಾಗೆ ನಿಯಮ 17-ಜೆರಲ್ಲಿ ಕೆಳಕಂಡ ಬಾಬ್ತುಗಳಿಗೂ ಕೂಡ ನಿಧಿಹಣವನ್ನು ಖರ್ಚು ಮಾಡಬಹುದು.

1) ಗೂಡಿನ ಮಾರುಕಟ್ಟೆ ಮತ್ತು ರೇಷ್ಮೆ ವಿನಿಮಯ ಕೇಂದ್ರಗಳ ಕಟ್ಟಡಗಳನ್ನು ಕಟ್ಟುವುದು.
2) ಗೂಡಿನ ಮಾರುಕಟ್ಟೆಗಳಿಗೆ ಮತ್ತು ವಿನಿಮಯ ಕೇಂದ್ರಗಳಿಗೆ ಬೇಕಾದ ಸೌಲಭ್ಯಗಳನ್ನು ಒದಗಿಸಲು.
3) ರೇಷ್ಮೆ ಗೂಡು ಮತ್ತು ರೇಷ್ಮೆ ದಾರ ಇವುಗಳ ಗುಣಮಟ್ಟವನ್ನು ಪರೀಕ್ಷಿಸಲು ಮತ್ತು ವರ್ಗೀಕರಿಸುವುದು.
4) ರೇಷ್ಮೆ ದಾರದ ತಳ ಬೆಲೆಯನ್ನು ಆಗಿಂದಾಗ್ಗೆ ನಿಗದಿಪಡಿಸುವುದು.

ಪ್ರಾಧಿಕಾರದ ಅಧ್ಯಕ್ಷರ ಕೆಲಸಗಳು

1. ನಿಧಿಯನ್ನು ಅಧ್ಯಕ್ಷರು ಮತ್ತು ಸದಸ್ಯ ಕಾರ್ಯದರ್ಶಿಗಳು ಒಟ್ಟಾಗಿ ವ್ಯವಹರಿಸುವುದು.
2. ಸಂಬಂಧಪಟ್ಟ ಲೆಕ್ಕಪತ್ರಗಳನ್ನು ಇತರೆ ಪುಸ್ತಕಗಳನ್ನು ಇಡುವಂತೆ ಮಾಡುವುದು ಹಾಗೂ ವಾರ್ಷಿಕ ಲೆಕ್ಕಪತ್ರ ಪಟ್ಟಿಗಳನ್ನು ತಯಾರಿಸುವುದು.

ಪ್ರತಿ ವರ್ಷ ಫೆಬ್ರವರಿ 1ನೇ ತಾರೀಖಿಗಿನ್ನ ಮುನ್ನ ಮುಂದಿನ ವರ್ಷದ ಈ ನಿಧಿಪ್ರಾಧಿಕಾರದ ಆಯವ್ಯಯದ ಅಂದಾಜು ಪಟ್ಟಿಯನ್ನು ತಯಾರಿಸಿ, ಪ್ರಾಧಿಕಾರದ

ಮುಂದಿಡುವುದು ಮತ್ತು ನಿಧಿ ಪ್ರಾಧಿಕಾರ ಆಗ್ಗಾಗ್ಗೆ ಕೇಳತಕ್ಕಂತಹ ವಿವರಗಳನ್ನು ಒದಗಿಸುವುದು.

ನಿಧಿ ಪ್ರಾಧಿಕಾರ ಒಪ್ಪಿಗೆ ಕೊಟ್ಟಂತಹ ಅಂದಾಜು ಪಟ್ಟಿಯನ್ನು ರಾಜ್ಯ ಸರ್ಕಾರದ ಒಪ್ಪಿಗೆಗೆ ಮತ್ತು ಅನುಮೋದನೆಗೆ ಒಪ್ಪಿಸುವುದು. ನಿಧಿ ಈ ರೀತಿ ಒಪ್ಪಿಸಿದ ಅಂದಾಜುನ್ನು ಸರ್ಕಾರ ಒಪ್ಪಬಹುದು ಅಥವಾ ಒಪ್ಪದಿರ ಬಹುದು. ಅಥವಾ ಭಾಗಶಃ ಒಪ್ಪಿ ತಿದ್ದುಪಡಿಗೆ ಹಿಂದಿರುಗಿಬಹುದು. ಆದುದರಿಂದ ನಿಧಿಯ ಅಂತಿಮ ತೀರ್ಮಾನ ಸರ್ಕಾರಕ್ಕೆ ಬಿಟ್ಟದ್ದು. ಈ ಪ್ರಾಧಿಕಾರ ಸ್ವತಃ ಕೆಲಸ ನಿರ್ವಯಿಸತಕ್ಕಂತಹ ಪೂರ್ತಿ ಅಧಿಕಾರಿ ಹೊಂದಿರುವುದಿಲ್ಲ. ರೇಷ್ಮೆ ಬೆಳಗಾರರ ಹಾಗೂ ನೂಲು ಬಿಚ್ಚಾಣಿಕೆದಾರರ ಹಿತರಕ್ಷಣೆಗಾಗಿ ಬೇಕಾದಂತಹ ಕಾರ್ಯಕ್ರಮಗಳ ಬಗ್ಗೆ ಶೀಘ್ರ ತೀರ್ಮಾನ ಕೈಗೊಳ್ಳಲು ಈ ಪ್ರಾಧಿಕಾರ ಎಲ್ಲಾ ಸಂಭಂಧ ಪಟ್ಟ ಸಂಸ್ಥೆಗಳನ್ನು ಇಲಾಖೆಗಳನ್ನು ಅಧಿಕಾರ ಮಟ್ಟದಲ್ಲಿ ಒಟ್ಟಾಗಿ ಭಾಗವಹಿಸುವಂತೆ ಮಾಡುವ ಉದ್ದೇಶ ಹೊಂದಿರುತ್ತದೆ. ಸರ್ಕಾರ ಒಪ್ಪಿಗೆ ಕೊಡತಕ್ಕಂತಹ ಅಧಿಕಾರ ಹೊಂದಿದೆ.

ಈ ಎಲ್ಲಾ ಅಧಿಕಾರಿಗಳು, ಸರ್ಕಾರದ ವಿವಿಧ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುವವರು. ಇಂತಹ ಒಂದು ರಚನೆಯಲ್ಲಿ ಸರ್ಕಾರೇತರ ಅಧಿಕಾರಿ ಹೊಂದಾಣಿಕೆಯಾಗುವುದಿಲ್ಲ. ಅಂತಿಮ ಒಪ್ಪಗೆ ಸರ್ಕಾರದ್ದೇ ಆಗಿರುವುದರಿಂದ ಈ ನಿಧಿ ಪ್ರಾಧಿಕಾರ ಶಿಫಾರಸ್ಸು ಮಾಡತಕ್ಕಂಹ ಒಂದು ಪ್ರಾಧಿಕಾರ.

ಈ ಪ್ರಾಧಿಕಾರವು ನಿಧಿಯ ನಿರ್ವಹಣೆ ಮಾಡಬೇಕಾಗಿರುವುದರಿಂದ ಹಾಗೂ ರೇಷ್ಮೆ ಇಲಾಖೆ ನಿರ್ದೇಶಕರು ರೇಷ್ಮೆಗೆ ಸಂಬಂಧಪಟ್ಟ ಎಲ್ಲಾ ಕೆಲಸ ಕಾರ್ಯಗಳ ಜವಾಬ್ದಾರಿ ಹೊಂದಿರುವುದರಿಂದ ಅವರನ್ನು ಈ ನಿಧಿಯ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ.

ನಿಧಿಯ ನಿರ್ವಹಣೆಯ ಹೊಣೆಗಾರಿಕೆ ಮೇಲೆ ತಿಳಿಸಿದ ಪ್ರಕಾರ ಇರುವುದರಿಂದ ಇದರ ಜವಾಬ್ದಾರಿಯನ್ನು ನಿರ್ವಹಿಸಲು ಒಬ್ಬ ಅಧಿಕಾರಿ ಇರುವುದು ಸೂಕ್ತ. ಕರ್ನಾಟಕ ರೇಷ್ಮೆಯು ರಾಷ್ಟ್ರೀಯ ಮಟ್ಟದಲ್ಲಿ ಒಂದು ಗುರುತರ ಸ್ಥಾನವನ್ನು ಪಡೆದಿದೆ. ವಿಶ್ವ ಬ್ಯಾಂಕ್ ನೆರವಿನೊಂದಿಗೆ ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆ, ಮೊದಲನೇ ಹಂತವನ್ನು ಯಶಸ್ವಿಯಾಗಿ ಕಾರ್ಯಗತ ಮಾಡಿ ಈಗ ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆ 2ನೇ ಹಂತವನ್ನು ಕೈಗೆತ್ತಿಕೊಂಡಿದ್ದೇವೆ. ಇದೂ ಅಲ್ಲದೆ ಕೇಂದ್ರ ರೇಷ್ಮೆ ಮಂಡಳಿಯು ಅದರ ವಿವಿಧ ಯೋಜನೆಗಳ ಮೂಲಕ ಕರ್ನಾಟಕ ರೇಷ್ಮೆ ಅಭಿವೃದ್ಧಿಗಾಗಿ ಸಂಶೋಧನೆ ಹಾಗೂ ತರಬೇತಿ ಮುಂತಾದ ಕಾರ್ಯಕ್ರಮಗಳನ್ನು ಒದಗಿಸಿಲಾಗುತ್ತಿದೆ.

ಕರ್ನಾಟಕ ಸರ್ಕಾರವಂತು ರೇಷ್ಮೆ ಉದ್ದಿಮೆಯನ್ನು ಬಹು ಮುಖ್ಯವಾದ ಕಸಬು ಎಂದು ಪರಿಗಣಿಸಿ ರೇಷ್ಮೆ ಬೆಳಿಗಾರರ ಹಾಗೂ ನೂಲು ಬಿಚ್ಚಾಣಿಕೆದಾರರ ಅನುಕೂಲಕ್ಕಾಗಿ ಹಣ ಒದಗಿಸಲಾಗುತ್ತಿದೆ.

ಈ ವಿವಿಧ ಮೂಲಗಳಿಂದ ಬರತಕ್ಕಂತಹ ಹಣ ಒಂದೇ ಬಾಬಿಗೆ ಖರ್ಚಾಗದ ರೀತಿ ಇಲಾಖೆ ಎಚ್ಚರಿಕೆ ವಹಿಸುತ್ತದೆ ಹಾಗೂ ರೈತರಿಗೆ ನೂಲು ಬಿಚ್ಚುವವರಿಗೆ ಅನುಕೂಲವಾಗುವಂತೆ ಒಂದೇ ರೀತಿ ದೊರೆಯುವಂತೆ ಮಾಡುತ್ತದೆ. ಹಿಪ್ಪು ನೇರಳೆ ವ್ಯವಸಾಯದಿಂದ ಮಾರಾಟದವರೆಗೆ ಸರಿಯಾದ ಸಂಯುಕ್ತ ಗುರಿಯನ್ನು ಹೊಂದಿರುತ್ತದೆ. ಇಲಾಖೆ ವ್ಯವಸ್ಥಿತ ರೀತಿಯಲ್ಲಿ ಮೇಲ್ವಿಚಾರಣೆ ಮಾಡುತ್ತದೆ. ಈ ಎಲ್ಲಾ ಕೆಲಸ ಕಾರ್ಯಗಳನ್ನು ಇಲಾಖೆಯ ವಿವಿಧ ಹಂತದಲ್ಲಿ ಕೆಲಸ ಮಾಡತಕ್ಕಂತಹ ಅಧಿಕಾರಿಗಳು ಮತ್ತು ನೌಕರರು ನಿರ್ವಹಿಸುತ್ತಾರೆ. ಇಲಾಖೆಯ ಮೇಲ್ವಿಚಾರಕರಾಗಿರುವ ನಿರ್ದೇಶಕರೇ ಈ ಪ್ರಾಧಿಕಾರದ ಅಧ್ಯಕ್ಷರಾಗಿರುವುದು ಸೂಕ್ತವಾಗಿರುತ್ತದೆ.